# ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

**ಸಿ.ಸಿ.ನಂ.ಃ 611/13**

ಸಿ.ಡಬ್ಲ್ಯು. 10

ಪಿ.ಡಬ್ಲ್ಯು. 9

| | | |
|---|---|---|
| ಸಾಕ್ಷಿದಾರರ ಹೆಸರು | : | ಯಮುನಾ ಗಾವಡಿ |
| ತಂದೆಯ/ಗಂಡನ ಹೆಸರು | : | ನಾಗಪ್ಪ ಗಾವಡಿ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ್ತವ್ಯ | : | ಕಿಮಾನಿ, ಕುಮಟಾ ತಾಲೂಕ |

(ಇಂದು ದಿನಾಂಕಃ **24-04-2019** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

## ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ಚಾ.ಸಾ.1 ನನ್ನ ಅಕ್ಕ. ನನಗೆ ಆರೋಪಿತರ ಪರಿಚಯ ಇದೆ. ಅವರಿಬ್ಬರು 2009 ರಲ್ಲಿ ನಮ್ಮ ಊರಿನಲ್ಲಿ ಕಾರ್ಖಾನೆ ಸ್ಥಾಪಿಸಲು ಬಂದಿದ್ದರು. ಆರೋಪಿತರು ರೂ. 3,00,000-00 ಪಾವತಿಸಿದರೆ ನನಗೆ ನೌಕರಿ ಕೊಡಿಸುವುದಾಗಿ ಭರವಸೆ ನೀಡಿದರು. ಚಾ.ಸಾ.1ರವರು ತಮ್ಮ ಸಿಂಡಿಕೇಟ್ ಬ್ಯಾಂಕ್‌ನ ಚಕ್ ಮುಖಾಂತರ ರೂ. 25,000-00, ನನ್ನ ಅಣ್ಣ ಚಾ.ಸಾ.9 ಕೆ.ವಿ.ಜಿ. ಬ್ಯಾಂಕ್‌ನ ಚಕ್ ಮುಖಾಂತರ ರೂ. 25,000-00 ಮತ್ತು ನನ್ನ ತಂದೆ ನಾಗಪ್ಪ ರೂ. 35,000-00 ವನ್ನು ಬಂಗಾರ ಅಡವಿಟ್ಟು ಆರೋಪಿತರಿಗೆ ಪಾವತಿಸಿರುತ್ತಾರೆ. 2009 ರಲ್ಲಿ ನಾವು ಸದ್ರಿ ಒಟ್ಟೂ ರೂ. 85,000-00 ವನ್ನು ಪಾವತಿ ಮಾಡಿರುತ್ತೇವೆ. ಸದ್ರಿ ಸಮಯ ನಾನು ಪ್ರಥಮ ದರ್ಜೆ ಸಹಾಯಕಳಾಗಿ ಪರೀಕ್ಷೆಯನ್ನು ಬರೆದಿದ್ದೆನು. ಸದ್ರಿ ಪರೀಕ್ಷೆಯ ಹಾಲ್‌ಟಿಕೇಟ್‌ನ್ನು 1ನೇ ಆರೋಪಿತೆ ತೆಗೆದುಕೊಂಡು ಹೋಗಿರುತ್ತಾಳೆ. ಆರೋಪಿತರು ಭರವಸೆ

ನೀಡಿದಂತೆ ನನಗೆ ನೌಕರಿ ಕೊಡಿಸಿಲ್ಲ ಮತ್ತು ನಾವು ಪಾವತಿ ಮಾಡಿದ ಹಣವನ್ನು ಮರುಪಾವತಿ ಮಾಡಿಲ್ಲ. ಈ ರೀತಿ ಆರೋಪಿತರು ನಮಗೆ ಮೋಸ ಮಾಡಿರುತ್ತಾರೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಗೈರು-ಹಾಜರಿದ್ದು ಶ್ರೀ ವಿ.ಜಿ.ಎಚ್. ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ನ್ಯಾ.ದ ಸಮಯವೂ ಕೂಡ ಅಭಾವ ಇರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು..)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಜೆ.ಎಂ.ಎಫ್.ಸಿ. ಕುಮಟಾ.